ದ.ಕ. ಕೃಷಿ ಅಭಿವೃದ್ಧಿ ಸಹಕಾರಿ ಸಂಘದ ಸಭೆ | 2020-21ನೇ ಸಾಲಿನಲ್ಲಿ 30.16 ಲಕ್ಷ ರೂ. ನಿವ್ವಳ ಲಾಭ

ಸದಸ್ಯರಿಗೆ ಶೇಕಡಾ 8 ಡಿವಿಡೆಂಡ್ ಘೋಷಣೆ

• ದಿಗಂತ ವರದಿ, ಬಂಟ್ವಾಳ

ದಕ್ಷಿಣ ಕನ್ನಡ ಕೃಷಿ ಅಭಿವೃದ್ಧಿ ಸಹಕಾರಿ ಸಂಘದ (ಸ್ಕ್ಯಾಡ್ಸ್) 2020-21ನೇ ಸಾಲಿನಲ್ಲಿ 3.48 ಕೋ.ರೂ. ಮೌಲ್ಯದ ಕೃಷಿ ಯಂತ್ರೋಪಕರಣ ಮಾರಾಟ ಹಾಗೂ 1.46 ಕೋ.ರೂ. ಕೃಷಿ ವ್ಯವಹಾರ ನಡೆಸಿ 30.16 ಲಕ್ಷ ರೂ. ನಿವ್ವಳ ಲಾಭಗಳಿಸಿದೆ. ಬ್ಯಾಂಕಿಂಗ್ ವ್ಯವಹಾರದಲ್ಲಿ 27.32 ಕೋ.ರೂ. ವ್ಯವಹಾರ ನಡೆಸಿ ಮುನ್ನಡೆಯುತ್ತ ಸಾಗುತ್ತಿದೆ ಎಂದು ಸಂಘದ ಅಧ್ಯಕ್ಷ ರವೀಂದ್ರ ಕಂಬಳಿ ಅವರು ತಿಳಿಸಿದ್ದಾರೆ.

ಮಂಗಳೂರು ಬಲ್ಲಾಳ್‌ಬಾಗ್‌ನ ಶಾಂತಿ ನಿಲಯದಲ್ಲಿ ನಡೆದ ಸಂಘದ 59ನೇ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಲಾಭಾಂಶದಲ್ಲಿ ಸದಸ್ಯರಿಗೆ ಶೇ. 8 ಡಿವಿಡೆಂಡ್ ನ್ನು ಘೋಷಿಸಿದರು. ಸಂಘವು ಸತತವಾಗಿ ಆಡಿಟ್ ವರ್ಗೀಕರಣದಲ್ಲಿ 'ಎ' ದರ್ಜೆ ಪಡೆದುಕೊಂಡಿದೆ ಎಂದ ಅವರು, ಮುಂದಿನ ದಿನಗಳಲ್ಲಿ ಸೋಲಾರ್ ಉತ್ಪನ್ನಗಳನ್ನು ಸೆಲ್ಕೋ ಸಂಸ್ಥೆಯ ಜೊತೆಯಾಗಿಯೊಂದಿಗೆ ವ್ಯವಹಾರವನ್ನು ಆರಂಭಿಸಲಾಗುವುದು ಎಂದು ಅವರು ಹೇಳಿದರು.

ಇದೇ ವೇಳೆ 2020-21ನೇ ಸಾಲಿನಲ್ಲಿ ಅತ್ಯಧಿಕ ವ್ಯವಹಾರ ನಡೆಸಿದ ಸಹಕಾರಿ ಸಂಸ್ಥೆಗಳಾದ ತಾಲೂಕು ಮಟ್ಟದಲ್ಲಿ ಮಂಗಳೂರು ತಾಲೂಕಿನ [illegible] ಸ. ಸಂಘ-(ಪ್ರಥಮ). ಬಂಟ್ವಾಳ ತಾಲೂಕಿನ ಸಿದ್ದಕಟ್ಟೆ ಪ್ರಾ.ಕೃ.ಪ. ಸ. ಸಂಘ (ಪ್ರಥಮ) ಮತ್ತು ಪೊಳಲಿ ಸೇ.ಸ. ಸಂಘ (ದ್ವಿತೀಯ). ಬೆಳ್ತಂಗಡಿ ತಾ.ನ ಕೊಯ್ಯೂರು ಪ್ರಾ.ಕೃ.ಪ.ಸ. ಸಂಘ (ಪ್ರಥಮ) ಮತ್ತು ಮಚ್ಚಿನ ಪ್ರಾ.ಕೃ.ಪ.ಸ. ಸಂಘ- (ದ್ವಿತೀಯ). ಪುತ್ತೂರು ತಾಲೂಕಿನ ಇರ್ದೆ ಬೆಟ್ಟಂಪಾಡಿ ಪ್ರಾ.ಕೃ.ಪ. ಸ. ಸಂಘ ನಿ.(ಪ್ರಥಮ). ನೆಲ್ಯಾಡಿ ಪ್ರಾ.ಕೃ.ಪ.ಸ. ಸಂಘ (ದ್ವಿತೀಯ) ಮತ್ತು [illegible] ಕೆಯ್ಯೂರು ಪ್ರಾ.ಕೃ.ಪ.ಸ. ಸಂಘ (ತೃತೀಯ), ಕುಂದಾಪುರ ತಾಲೂಕಿನಲ್ಲಿ [illegible] ವ್ಯ.ಸೇ.ಸ. ಸಂಘ (ಪ್ರಥಮ), ಸುಳ್ಯ ತಾಲೂಕಿನ [illegible] ಸೇ.ಸ. ಸಂಘ (ಪ್ರಥಮ)ಗಳನ್ನು ಗೌರವಿಸಲಾಯಿತು. ವ್ಯಕ್ತಿ ಸದಸ್ಯರಲ್ಲಿ ಅತ್ಯಧಿಕ ವ್ಯವಹಾರ ನಡೆಸಿದ ಬೆಳ್ತಂಗಡಿ ತಾಲೂಕಿನ ಎಂ. ನರಸಿಂಹ ಭಟ್, ಪುತ್ತೂರು ತಾಲೂಕಿನ ಚಂದ್ರಶೇಖರ [illegible], ಕಾರ್ಕಳ ತಾಲೂಕಿನ ಸುರೇಶ್ ಎಕ್ಕಾರು ಶೆಟ್ಟಿ, ಉಡುಪಿ ತಾಲೂಕಿನ ಪ್ರಕಾಶ್‌ಕುಮಾರ್, ಕುಂದಾಪುರ ತಾಲೂಕಿನ ಉದಯ ಗಾಣಿಗ, ಬಂಟ್ವಾಳ ತಾಲೂಕಿನ ದಿನೇಶ್ ರೈ ಅವರನ್ನು ಗೌರವಿಸಲಾಯಿತು.

ಇದೇ ವೇಳೆ ಸಂಘದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಸಿಬ್ಬಂದಿ ವೇದಾವತಿ ಶೆಟ್ಟಿ, ಅರವಿಂದ ಕುಮಾರ್ ಶೆಟ್ಟಿ, ರಮೇಶ್ ನಾಯಕ್ ಅವರನ್ನು ಸನ್ಮಾನಿಸಲಾಯಿತು. ಇತ್ತೀಚೆಗೆ ನಿಧನ ಹೊಂದಿದ ಹಿರಿಯ ಸಹಕಾರಿಗಳಾದ ಎನ್.ಎಸ್. ಗೋಖಲೆ ಹಾಗೂ ಎಂ.ಎಸ್. ಗೋಖಲೆ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಸಂಘದ ಉಪಾಧ್ಯಕ್ಷ ಅಶೋಕ್‌ಕುಮಾರ್ ಶೆಟ್ಟಿ ಅವರು ಸೆಲ್ಕೋ ಸೋಲಾರ್ ಉತ್ಪನ್ನಗಳನ್ನು ಸಂಘದ ಸದಸ್ಯರಿಗೆ ಪರಿಚಯಿಸಿದರು. ಸೆಲ್ಕೋ ಉತ್ಪನ್ನಗಳನ್ನು ಸಭೆಯಲ್ಲಿ ಪ್ರದರ್ಶಿಸಲಾಯಿತು. ನಿರ್ದೇಶಕರಾದ ಮೋನಪ್ಪ ಶೆಟ್ಟಿ ಎಕ್ಕಾರು, ರಾಜು ಪೂಜಾರಿ, ಜಯಶಂಕರ ಬಾಸ್ರಿತ್ತಾಯ, ಎಸ್.ಬಿ. [illegible], ಜಯರಾಮ ಹಿ.ಕೆ., ಎಸ್.ಬಿ. ಜಯರಾಮ ರೈ, ಶ್ರೀಕೃಷ್ಣಯ್ಯ ಮೂಲೆತೋಟ, ಕರುಣಾಕರ ಶೆಟ್ಟಿ ಬಿ., ಎಸ್.ಎ. ರಾಜಶೇಖರ ಜೈನ್, ಕೆ. ನೀಲಪ್ಪ ನಾಯ್ಕ, ಗಣೇಶ್ ಎ., ಹೇಮಾವತಿ, ಶಾರದಾ ಭಾಗವತ್ ಉಪಸ್ಥಿತರಿದ್ದರು.

ಸಂಘದ ಮಾಜಿ ಅಧ್ಯಕ್ಷ ಕೆ. ಜಯರಾಮ ರೈ, ಮಾಜಿ ನಿರ್ದೇಶಕರಾದ ಪದ್ಮನಾಭ ಕೊಟ್ಟಾರಿ, ಆನಂದ ನಾಯ್ಕ, ಇತರ ಸಹಕಾರಿ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯನಿರ್ವಹಣಾಧಿಕಾರಿಗಳು ಉಪಸ್ಥಿತರಿದ್ದರು.

ರಬ್ಬರ್-ಜೇನು ವ್ಯವಸಾಯಗಾರರ ಸಹಕಾರಿ ಸಂಘಕ್ಕೆ 18.83 ಲ.ರೂ. ಲಾಭ

ಬಂಟ್ವಾಳ: ದ.ಕ. ರಬ್ಬರ್ ಮತ್ತು ಜೇನು ವ್ಯವಸಾಯಗಾರರ ವಿವಿಧೋದ್ದೇಶ ಸಹಕಾರಿ ಸಂಘವು ಕಳೆದ ಸಾಲಿನಲ್ಲಿ ಒಟ್ಟು ರೂ. 28.5 ಕೋಟಿಗೂ ಮಿಕ್ಕಿ ವ್ಯವಹಾರ ನಡೆಸಿ ರೂ. 18.83 ಲಕ್ಷ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಕೆ.ಪಿ. [illegible] ಹೇಳಿದ್ದಾರೆ.

ಬಿ.ಸಿ.ರೋಡಿನಲ್ಲಿ ನಡೆದ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಲಾಭಾಂಶದಲ್ಲಿ ಸದಸ್ಯರಿಗೆ ಶೇ. 11ರಷ್ಟು ಡಿವಿಡೆಂಡ್ ಘೋಷಿಸಿದರು. ಇದೇ ವೇಳೆ ಜೇನು ಕೃಷಿಕ [illegible] ಭಟ್, ರಬ್ಬರ್ ಕೃಷಿಕ ರವಿ ಸುವರ್ಣ, ಪ್ರತಿಭಾವಂತ ವಿದ್ಯಾರ್ಥಿನಿ [illegible] ಅವರಿಗೆ ಸನ್ಮಾನ, ಬಡ ಕುಟುಂಬದ ಒಬ್ಬರಿಗೆ ಅವರ ಮನೆಗೆ [illegible] ಪ್ರೋತ್ಸಾಹಧನ ವಿತರಿಸಲಾಯಿತು. ಸಂಘದ ಸಿಇಒ ಗಂಗಾಧರ ಕೆ. [illegible] ಮಂಡಿಸಿದರು.

ಸಂಘದ ಉಪಾಧ್ಯಕ್ಷ ಮೋಹನ್ ಪಿ.ಎಸ್., ನಿರ್ದೇಶಕರಾದ ರಾಘವ ಪೂಜಾರಿ, ಪಿ. [illegible] ಜೈನ್, ತಿಮ್ಮಪ್ಪ ಪೂಜಾರಿ, ರಾಜೇಂದ್ರ ಹೊಳ್ಳ, [illegible] ಭಟ್, ಈಶ್ವರ ಬಾಳ್ತಿಲ, ಉಮೇಶ್ ಮಂಜ, ಅರವಿಂದ ಭಟ್, ವಸಂತ [illegible], ರಾಮಚಂದ್ರ ಪೂಜಾರಿ, ಎ.ಕೆ. [illegible], ರಾಮಚಂದ್ರ ಶೆಟ್ಟಿ [illegible] ಇದ್ದರು.

ಕಿರು ಸುದ್ದಿ

ಮಂಗಳೂರಿನ ಬಂದರಿನಲ್ಲಿ ನಾಳೆ ಕಾರುಣ್ಯ ಸಮಾವೇಶ

ಮಂಗಳೂರು: ಹಾವೇರಿಯ ಮುಕ್ಕಮಸ್ಸಿನ್ನ ಅಕಾಡೆಮಿಯು ಸುನ್ನೀ ಯುವಜನ ಸಂಘ ಮಂಗಳೂರು ಸೆಂಟರ್ ಸಮಿತಿ ಸಹಭಾಗಿತ್ವದಲ್ಲಿ ಕಾರುಣ್ಯ ಸಮಾವೇಶವನ್ನು ಅ.26ರಂದು ಸಂಜೆ 5 ಗಂಟೆಗೆ ನಗರದ ಬಂದರು [illegible] ಯತೀಂ ಖಾನಾ ಹಾಲ್‌ನಲ್ಲಿ ಆಯೋಜಿಸಿದೆ ಎಂದು ಅಕಾಡೆಮಿಯ ಅಧ್ಯಕ್ಷ ಕೆ.ಎಂ. ಮುಸ್ತಫಾ ನಈಮಿ ಹಾವೇರಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ತೀರಾ ಹಿಂದುಳಿದಿರುವ ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾಭ್ಯಾಸ, ಸಮಾಜ ಸೇವಾ ಚಟುವಟಿಕೆಗಳಲ್ಲಿ ನಿರತವಾಗಿರುವ 'ಮುಕ್ಕಮಸ್ಸಿನ್ನ ಅಕಾಡೆಮಿ ಕರ್ನಾಟಕ' ಸಂಸ್ಥೆಯು ಹಾವೇರಿ ಜಿಲ್ಲೆಯನ್ನು ಕೇಂದ್ರೀಕರಿಸಿ ಕಳೆದ ಏಳು ವರ್ಷಗಳಿಂದ ಕಾರ್ಯಾಚರಿಸುತ್ತಿದೆ. ಪ್ರವಾದಿ ಜನ್ಮ ಮಾಸಾಚರಣೆಯ ಭಾಗವಾಗಿ ಆರ್ಥಿಕವಾಗಿ ಬಹಳ ಸಂಕಷ್ಟದಲ್ಲಿರುವ ಆ ಭಾಗದ ಐದು ಸಾವಿರ ಕುಟುಂಬಗಳಿಗೆ ಆಹಾರ ಸಾಮಗ್ರಿಗಳನ್ನು ಒದಗಿಸುವ ನಿಟ್ಟಿನಲ್ಲಿ ಸಂಸ್ಥೆಯು "ಕರುಣೆಯ ಕೈ" ಎಂಬ ವಿಶಿಷ್ಟ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಇದರ ಪ್ರಚಾರಾರ್ಥ ಅ.26ರಂದು ಮಂಗಳೂರಿನಲ್ಲಿ ಕಾರುಣ್ಯ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅಕಾಡೆಮಿಯ ಕೋಶಾಧಿಕಾರಿ ಡಾ.ಶೇಖ್ ಬಾವ, ಮಂಗಳೂರು ಸೆಂಟರ್ ಎಸ್‌ವೈಎಸ್‌ನ ಅಧ್ಯಕ್ಷ ಕೆ.ಕೆ.ಸುಲೈಮಾನ್ ಮುಸ್ಲಿಯಾರ್, ನಗರ ಅಧ್ಯಕ್ಷ ಅಬ್ದುಲ್ ರಶೀದ್ ಹಾಜಿಕಟ್ಟೆ, ಪ್ರಧಾನ ಕಾರ್ಯದರ್ಶಿ ಹಮೀದ್ ಹಾಜಿಕಟ್ಟೆ ಉಪಸ್ಥಿತರಿದ್ದರು.

100 ಕೋಟಿ ಡೋಸ್ | ಕೊರೋನಾ ಯೋಧರಿಗೆ ಸಲ್ಲಿಸಿದರು ವಿಶಿಷ್ಟ ಗೌರವ

ತ್ರಿವರ್ಣದಲ್ಲಿ ಕಂಗೊಳಿಸಿತು ಬೇಕಲಕೋಟೆ

ಕಾಸರಗೋಡು: ಕೋವಿಡ್ ಪ್ರತಿರೋಧ ಲಸಿಕೆ ಅಭಿಯಾನದಲ್ಲಿ 100 ಕೋಟಿ ಡೋಸ್ ಪೂರ್ತಿಯಾದ್ದನ್ನು ನೀಡಲು ಸಹಕರಿಸಿದ ಆರೋಗ್ಯ ವಲಯದ ಕಾರ್ಯಕರ್ತರಿಗೆ ಗೌರವ ಸೂಚಕವಾಗಿ ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ನೇತೃತ್ವದಲ್ಲಿ ಕಾಸರಗೋಡು ಜಿಲ್ಲೆಯ ಬೇಕಲ ಕೋಟೆಯಲ್ಲಿ ದೀಪಾಲಂಕಾರ ನಡೆಸಲಾಯಿತು.

ತ್ರಿವರ್ಣ ಬೆಳಕು ವಿನ್ಯಾಸದ ಮೂಲಕ ಕೋವಿಡ್ ಪ್ರತಿರೋಧ ಮುಂಚೂಣಿ ಹೋರಾಟಗಾರರಿಗೆ ಗೌರವ ಸೂಚಿಸಲಾಯಿತು. ಯುನೆಸ್ಕೋದ ಜಾಗತಿಕ ಸಂಸ್ಕೃತಿ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ದೇಶದ 100 ಐತಿಹಾಸಿಕ ಸ್ಮಾರಕಗಳಲ್ಲಿ ತ್ರಿವರ್ಣ ಧ್ವಜದ ಬಣ್ಣದ ಬೆಳಕಿನ ವ್ಯವಸ್ಥೆ ಏರ್ಪಡಿಸುವ ಮೂಲಕ ಈ ಕಾರ್ಯಕ್ರಮವನ್ನು ನಡೆಸಲಾಯಿತು.

ಕಾಸರಗೋಡು ಜಿಲ್ಲೆಯ ಬೇಕಲಕೋಟೆ, ಕಣ್ಣೂರು ಜಿಲ್ಲೆಯ ಕಣ್ಣೂರು ಕೋಟೆಗಳಲ್ಲಿ ಪ್ರವಾಸಿಗರನ್ನು ಸೆಳೆಯುವ ರೀತಿಯಲ್ಲಿ ಈ ಕಾರ್ಯಕ್ರಮಗಳು ನಡೆದಿವೆ. ಈ ಮೂಲಕ ಆರೋಗ್ಯ ಕಾರ್ಯಕರ್ತರಿಗೆ ಗೌರವವನ್ನು ಸಲ್ಲಿಸಲಾಯಿತು. ಜೊತೆಗೆ ಪ್ರವಾಸೋದ್ಯಮ ವಲಯದ ಇತ್ತೀಚಿನ ಪ್ರಗತಿಗೆ ಮುನ್ನುಡಿ ಬರೆಯಲಾಯಿತು.

ಡಿ.21-26 ವರೆಗೆ ಮಠಂತಬೆಟ್ಟು ಶ್ರೀ ಮಹಿಷಮರ್ದಿನಿ ದೇಗುಲದಲ್ಲಿ ಬ್ರಹ್ಮಕಲಶೋತ್ಸವ: ಪೂರ್ವಭಾವಿ ಸಭೆ

ಪುತ್ತೂರು: ಕೋಡಿಂಬಾಡಿ ಗ್ರಾಮದ ಮಠಂತಬೆಟ್ಟು ಶ್ರೀ ಮಹಿಷಮರ್ದಿನಿ ದೇವಸ್ಥಾನದಲ್ಲಿ ಡಿ.21ರಿಂದ 26ರ ತನಕ ನಡೆಯಲಿರುವ ಬ್ರಹ್ಮಕಲಶೋತ್ಸವದ ಪೂರ್ವಭಾವಿ ಸಭೆ ಭಾನುವಾರ ದೇವಸ್ಥಾನದ [illegible] ಸಭಾಂಗಣದಲ್ಲಿ ನಡೆಯಿತು.

ಬ್ರಹ್ಮಕಲಶೋತ್ಸವ ಹಾಗೂ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ರೈ ಕೋಡಿಂಬಾಡಿ ಸಭೆಯ ಅಧ್ಯಕ್ಷತೆ ವಹಿಸಿ, ಕಳೆದ ಕೊರೋನಾ ಮಹಾಮಾರಿಯಿಂದಾಗಿ ಎರಡು ಬಾರಿ ಮುಂದೂಡಲ್ಪಟ್ಟ ಬ್ರಹ್ಮಕಲಶೋತ್ಸವವನ್ನು ಡಿ. 21ರಿಂದ ಆರು ದಿನಗಳ ಕಾಲ ನಡೆಸಲಾಗುವುದು. ಈ ಕುರಿತು [illegible] ತಂತ್ರಿ ಅವರ ಮಾರ್ಗದರ್ಶನದಲ್ಲಿ ಉದಯ ಕುಮಾರ ತಂತ್ರಿ ಅವರ ನೇತೃತ್ವದಲ್ಲಿ ಇತ್ತೀಚೆಗೆ ಪ್ರಶ್ನಾ ಚಿಂತನೆಯನ್ನು ನಡೆಸಿ ಬ್ರಹ್ಮಕಲಶೋತ್ಸವ ಪೂರ್ವಭಾವಿಯಾಗಿ ಪೂಜಾ ವಿಧಿವಿಧಾನಗಳನ್ನು ನಡೆಸಲಾಗಿದೆ. ಈ ಹಿಂದೆ [illegible] ರೀತಿ ನಿಗದಿಯಾದಂತೆ ಬ್ರಹ್ಮಕಲಶೋತ್ಸವವನ್ನು ವಿಜೃಂಭಣೆಯಿಂದ ನಡೆಸಲಾಗುವುದು ಎಂದು ತಿಳಿಸಿದರು.

ಈ ಹಿಂದಿನ ಯೋಜನೆಯಂತೆ ಆರು ದಿನಗಳ ಬ್ರಹ್ಮಕಲಶೋತ್ಸವದಲ್ಲಿ ದಿನವೂ ಸುಮಾರು 50 ಸಾವಿರ ಮಂದಿಯಂತೆ ಸುಮಾರು ಐದು ಲಕ್ಷ ಮಂದಿಗೆ ಅನ್ನಸಂತರ್ಪಣೆ ನೀಡುವ ಯೋಜನೆ ಹಾಕಲಾಗಿದೆ. ಬ್ರಹ್ಮಕಲಶೋತ್ಸವಕ್ಕೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ, ಮಾಜಿ ಸಚಿವ ಡಿ.ವಿ. ಸದಾನಂದ ಗೌಡ ಸಹಿತ [illegible] ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಬ್ರಹ್ಮಕಲಶದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ, ಭಜನಾ [illegible] 9ರಿಂದ ರಾತ್ರಿ 11ರ ತನಕ ನಿರಂತರವಾಗಿ ಆಯೋಜಿಸಲಾಗುವುದು. ಈ ಕುರಿತು ಅ.26 ರಂದು ಭಜನಾ ತಂಡದ ಮುಖ್ಯಸ್ಥರ ಸಮ್ಮುಖದಲ್ಲಿ ಸಭೆ ನಡೆಸಿ ಚರ್ಚಿಸಲಾಗುವುದು. ಈ ಹಿಂದೆ ಕ್ಷೇತ್ರದಲ್ಲಾದ ಧಾರ್ಮಿಕ ಕ್ರಿ. [illegible] ಕೊರೋನಾ [illegible] ದೇವಸ್ಥಾನಕ್ಕೆ [illegible] ಬ್ರಹ್ಮಕಲಶೋತ್ಸವದ [illegible] ಬಳಸಲಾಗುವುದು ಎಂದರು.

ಬ್ರಹ್ಮಕಲಶೋತ್ಸವ ಕಾರ್ಯಾಧ್ಯಕ್ಷ [illegible] ಕೋಶಾಧಿಕಾರಿ [illegible], ಮಾಜಿ [illegible] ಸ್ವಾಗತ ಸಮಿತಿ ಅಧ್ಯಕ್ಷ ನಿರಂಜನ ರೈ ಮಠಂತಬೆಟ್ಟು, ಜೀರ್ಣೋದ್ಧಾರ ಸಮಿತಿ ಪ್ರಧಾನ ಕಾರ್ಯದರ್ಶಿ ರಮೇಶ್ ನಾಯಕ್ [illegible] ಉಪಸ್ಥಿತರಿದ್ದರು. ಸಭೆಯಲ್ಲಿ [illegible] ಅಲಂಕಾರ ಸಮಿತಿ ಸಂಚಾಲಕ [illegible], ವಿವಿಧ ಅಲಂಕಾರ ಸಮಿತಿಯ [illegible] ಸಮಿತಿಯ [illegible] ಉಪಸ್ಥಿತರಿದ್ದರು.

ಕೋಡಿಂಬಾಡಿ ಗ್ರಾಮ [illegible] ಸಮಿತಿಯ ಜಯಪ್ರಕಾಶ್ ಬದಿನಾರು ಸ್ವಾಗತಿಸಿ, ವಂದಿಸಿದರು.

ದೇಗುಲಕ್ಕೆ ಬರುವ ರಸ್ತೆಗಳ ಅಲಂಕಾರ

ಬ್ರಹ್ಮಕಲಶದಂಗವಾಗಿ ದೇಗುಲಕ್ಕೆ ಬರುವ ರಸ್ತೆಗಳನ್ನು ಅಲಂಕಾರಿಸಲಾಗುವುದು ಎಂದು ಅಶೋಕ್‌ಕುಮಾರ್ ರೈ ಕೋಡಿಂಬಾಡಿ ಹೇಳಿದರು. ಪರ್ಲ-ಕೋಡಿಂಬಾಡಿ, ಕೋಡಿಂಬಾಡಿ ಶಾಲಾ ಬಳಿಯಿಂದ ದೇವಸ್ಥಾನ, ಶಾಂತಿನಗರ-ದೇವಸ್ಥಾನ ದಾರಿಗಳು ಗೂಡುದೀಪಗಳಿಂದ ಕಂಗೊಳಿಸಲಿದೆ. ಬೊಳುವಾರಿನಿಂದ ದೇವಸ್ಥಾನದ ತನಕ ಬಂಟಿಂಗ್ ಅಳವಡಿಕೆ ಆಯಾ ಪ್ರದೇಶದ ಭಜನಾ ತಂಡ, ಸಂಘಟನೆಗಳ ನೇತೃತ್ವದಲ್ಲಿ ನಡೆಯಲಿದೆ ಎಂದು ಅವರು ತಿಳಿಸಿದರು.

ವಿವಿಧ ಕಡೆಗಳಿಂದ ಬಸ್ ವ್ಯವಸ್ಥೆ

ಬ್ರಹ್ಮಕಲಶೋತ್ಸವ ಸಂಭ್ರಮಕ್ಕೆ ರಾಜ್ಯದ ವಿವಿಧ ಕಡೆಗಳಿಂದ ಬರುವ ಭಕ್ತರಿಗೆ ಬಸ್ಸಿನ ವ್ಯವಸ್ಥೆ ಮಾಡುವಂತೆ ಈಗಾಗಲೇ ಸಾರಿಗೆ ಸಚಿವ ಶ್ರೀರಾಮುಲು ಅವರಲ್ಲಿ ವಿನಂತಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ರೈ ಕೋಡಿಂಬಾಡಿ ಹೇಳಿದರು.

ವಿಶ್ವದರ್ಜೆಯ ವಿಡಿಯೋ ಸಾಂಗ್ ಈಗ 1.3 ಲಕ್ಷಕ್ಕೂ ಅಧಿಕ ಮಂದಿ ವೀಕ್ಷಣೆ

ಟ್ರೆಂಡಿಂಗ್‌ನಲ್ಲಿದೆ ತುಳುವಿನ 'ಡ್ಯಾನ್ಸ್ ಡ್ಯಾನ್ಸ್!'



- ಅಮೆರಿಕದ ಬಿಎಂಎಸ್ ರೇಡಿಯೋ ನೆಟ್ ವರ್ಕ್ ಚಿಕಾಗೋದಲ್ಲಿ ಪ್ರಸಾರಗೊಳ್ಳುತ್ತಿರುವ ಮೊದಲ ತುಳು ಹಾಡು
- ಎನ್ ಆ್ಯಂಡ್ ಎನ್ (ಡಾ.ನಿತಿನ್ ಆ್ಯಂಡ್ ನಿಶಾನ್ ಎನ್.) ಕ್ರಿಯೇಷನ್ ಯೂಟ್ಯೂಬ್ ಚಾನೆಲ್‌ನಲ್ಲಿ 1.3 ಲಕ್ಷಕ್ಕೂ ಹೆಚ್ಚು ವೀಕ್ಷಣೆ ಗಳಿಸಿ ಟ್ರೆಂಡಿಂಗ್

ಮಂಗಳೂರು: ಪ್ರಾದೇಶಿಕ ಭಾಷೆಯಾದ ತುಳುವನ್ನು ಜಾಗತಿಕ ಮಟ್ಟದಲ್ಲಿ ಗುರುತಿಸುವಂತೆ ಮಾಡಲು ಮಂಗಳೂರಿನ ತಂಡವೊಂದು ವಿಶ್ವ ದರ್ಜೆ ಗುಣಮಟ್ಟದ ಡ್ಯಾನ್ಸ್ ವೀಡಿಯೊ ಸಾಂಗ್ 'ಡ್ಯಾನ್ಸ್ ಡ್ಯಾನ್ಸ್' ಅನ್ನು ರಚಿಸಿದ್ದಾರೆ. ಅಮೆರಿಕದ ಬಿಎಂಎಸ್ ರೇಡಿಯೋ ನೆಟ್‌ವರ್ಕ್ ಚಿಕಾಗೋದಲ್ಲಿ ಪ್ರಸಾರಗೊಳ್ಳುತ್ತಿರುವ ಮೊದಲ ತುಳು ಹಾಡು ಇದಾಗಿದೆ ಎಂದು ಹಾಡಿನ ನಿರ್ಮಾಪಕ, ವೈದ್ಯ ಡಾ.ನಿತಿನ್ ಎನ್. ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೃತ್ತಿಪರವಾಗಿ ತಯಾರಿಸಿದ ಅತ್ಯುತ್ತಮ ನೃತ್ಯ ಸಂಯೋಜನೆ ಹೊಂದಿರುವ ಈ ಹಾಡು ಎನ್ ಆ್ಯಂಡ್ ಎನ್ (ಡಾ.ನಿತಿನ್ ಆ್ಯಂಡ್ ನಿಶಾನ್ ಎನ್.) ಕ್ರಿಯೇಷನ್ಸ್ ಯೂಟ್ಯೂಬ್ ಚಾನೆಲ್‌ನಲ್ಲಿ 1.3 ಲಕ್ಷಕ್ಕೂ ಹೆಚ್ಚು ವೀಕ್ಷಣೆ ಗಳಿಸಿ ಟ್ರೆಂಡಿಂಗ್ ನಲ್ಲಿದೆ ಎಂದು ತಿಳಿಸಿದರು.

[illegible] 15ಕ್ಕೂ ಹೆಚ್ಚು ರೇಡಿಯೊ ಸ್ಟೇಷನ್‌ಗಳಲ್ಲಿ ಈ ಹಾಡು ಪ್ರಸಾರಗೊಂಡಿದೆ. ಭಾರತದ ಅತ್ಯುತ್ತಮ [illegible] ಮೊದಲ ತುಳು ಹಾಡು ಇದಾಗಿದ್ದು [illegible] ಚಿತ್ರೀಕರಣಗೊಂಡ ಮೊದಲ ತುಳು ಆಲ್ಬಂ ಹಾಡಾಗಿದೆ. ಈ ಹಾಡನ್ನು ಭಾರತ, ಅಮೆರಿಕ, ಮಧ್ಯ ಮತ್ತು ಯುರೋಪಿಯನ್ ದೇಶಗಳಲ್ಲಿ ಮೆಚ್ಚಿದ್ದಾರೆ ಎಂದರು.

ಈ ಆಲ್ಬಂಗೆ ಡಾ.ಎನ್.ನಿತಿನ್ ನಿರ್ದೇಶಿಸಿದ್ದು, ನಿಶಾನ್ ಎನ್. ಹಾಡಿದ್ದಾರೆ. [illegible] ಪೆರೇರಾ ಸಂಗೀತ ನಿರ್ದೇಶಿಸಿದ್ದಾರೆ. ಹಾಡಿನ ಸಂಯೋಜನೆಯನ್ನು ಟೀಮ್ [illegible] ಮಾಡಿದ್ದಾರೆ. ಪ್ರಮುಖ ಪಾತ್ರಗಳಲ್ಲಿ ಸಿದ್ಧಾರ್ಥ್ ಶೆಟ್ಟಿ, [illegible] ಪೂಜಾರಿ ನಟಿಸಿದ್ದಾರೆ. ಸಂಗೀತ ವೀಡಿಯೊದಲ್ಲಿ ವಿಶಾಲ್, ವಿಶಾಲ್ ಪುತ್ರನ್ ಕಾಣಿಸಿಕೊಂಡಿದ್ದಾರೆ. ಮೋಹನ್ ರಾಜ್, ಡಾ.ನಿತಿನ್ ಸಾಹಿತ್ಯ ಬರೆದಿದ್ದಾರೆ.

https://www.youtube.com/watch?v=6TkzqPcTMpM ಲಿಂಕ್ ಕ್ಲಿಕ್ ಮಾಡುವ ಮುಖಾಂತರ ಹಾಡು ವೀಕ್ಷಿಸಬಹುದು ಎಂದು ಹೇಳಿದರು.

ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ, ಶಾಸ್ತ್ರಿ ಭವನ್, ಹೊಸದಿಲ್ಲಿ.

[illegible]

CIN L23209KA1988GOI008959, PAN AAACM5132A, [illegible]

[illegible]

[illegible]

[illegible] ("MCA Order") [illegible] "MCA" [illegible]

MCA [illegible] ("MCA Circulars") [illegible] "Circulars issued by SEBI" [illegible] SEBI/HO/CFD/CMD1/CIR/P/2020/79 [illegible] SEBI/HO/CFD/CMD2/CIR/P/2021/11 [illegible] SEBI [illegible] ("SEBI Listing Regulations") [illegible] ("VC") [illegible] ("OAVM") [illegible]

[illegible]	[illegible]	[illegible]
[illegible]	[illegible] 2021	[illegible] 10 [illegible]

[illegible] "Particulars" [illegible]

[illegible] www.mrpl.co.in [illegible] www.bseindia.com [illegible] www.nseindia.com [illegible] www.linkintime.co.in [illegible] (NSDL) [illegible] www.evoting.nsdl.com [illegible]

MCA [illegible] VC/OAVM [illegible] MCA [illegible] SEBI [illegible]

3. [illegible]
4. [illegible]
5. [illegible]
6. [illegible]
7. [illegible] NSDL [illegible] evoting@nsdl.co.in [illegible]
8. [illegible]
9. [illegible] www.mrpl.co.in [illegible] www.linkintime.co.in [illegible]
10. [illegible] www.mrpl.co.in [illegible] www.bseindia.com [illegible] www.nseindia.com [illegible] www.linkintime.co.in [illegible]
11. [illegible] mrplirc@linkintime.co.in [illegible] rnt.helpdesk@linkintime.co.in [illegible] www.mrpl.co.in [illegible] www.bseindia.com [illegible] www.nseindia.com [illegible] VC/OAVM [illegible]
12. [illegible] investor@mrpl.co.in [illegible]

[illegible] www.mrpl.co.in [illegible] www.bseindia.com [illegible] www.nseindia.com [illegible]

[illegible] 2021 [illegible]

[illegible]
ಸಹಿ/- [illegible]
[illegible]